ಓ.ಎಸ್. ನಂ.166/2023
ಪಿ. ಡಬ್ಲ್ಯೂ-1

<u>ದಿನಾಂಕಃ **09-03-2026**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು :1 ಮತ್ತು 2 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ.ಎಸ್.ಬಿ.ಪಿ ರವರಿಂದ

ಸಾಯಣ್ಣ ಮನೆಯ ಹಿರಿಯ ಇರುತ್ತಾನೆ ಎಂದರೆ ಸರಿ. ಸಾಯಣ್ಣ ನನ್ನ ತಾಯಿಯ ತಂದೆ ಇರುತ್ತಾರೆ. ಸಾಯಣ್ಣ ಜೀವಂತ ಇರುವುದಿಲ್ಲ ಅವರು 2001 ರಲ್ಲಿ ಮೃತಪಟ್ಟಿರುತ್ತಾರೆ. ಸಾಯಣ್ಣನ ಹೆಂಡತಿಯ ಹೆಸರು ಹಣಮವ್ವ ಇರುತ್ತದೆ. ನಾನು ಜನಿಸಿದ 2 ವರ್ಷದಲ್ಲಿ ಹಣಮವ್ವ ಮೃತಪಟ್ಟಿರುತ್ತಾಳೆ ಅವಳನ್ನು ನಾನು ನೋಡಿರುವುದಿಲ್ಲ. ಸಾಯಣ್ಣನಿಗೆ 3 ಜನ ಮಕ್ಕಳು ಇರುತತಾರೆ ಅವರ ಹೆಸರುಗಳು ಚಂದ್ರಮ್ಮ, ಮಾಣಿಕಪ್ಪ ಮತ್ತು ಮೊಘಲಪ್ಪ ಇರುತ್ತವೆ. ನನ್ನ ತಾಯಿಯ ಹೆಸರು ಚಂದ್ರಮ್ಮ ಇರುತ್ತದೆ. ನನ್ನ ತಾಯಿಗೆ ಮೂರು ಜನ ಮಕ್ಕಳು ಇರುತ್ತಾರೆ ಅವರ ಹೆಸರುಗಳು ಬುಗ್ಗಪ್ಪ ಅಂದರೆ ನಾನು, ಮೊಘಲಪ್ಪ ಮತ್ತು ಹಣಮವ್ವ ಇರುತ್ತವೆ. ನಾವೇ ಮೂರು ಜನರು ಚಂದ್ರಮ್ಮನ ವಾರಸುದಾರರು ಇರುತ್ತೇವೆ ಎಂದರೆ ಸರಿ. ಹಣಮವ್ವ ನನ್ನ ತಂಗಿಯಾಗಬೇಕು ಅವರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತೇನೆ. ಹಣಮವ್ವರವರು ಈ ಪ್ರಕರಣದ ಪ್ರತಿವಾದಿ ನಂಃ 11 ಇರುತ್ತಾರೆ.

ದಿನಾಂಕಃ 23.05.2015 ರಂದು ನನ್ನ ತಾಯಿಯವರು ಮೃತಪಟ್ಟಿದ್ದರು ಎಂದರೆ ಸರಿ. 1 ರಿಂದ 4 ನೇ ಪ್ರತಿವಾದಿಯರು ಮಾಣಿಕಪ್ಪನ ಮಕ್ಕಳು ಇರುತ್ತಾರೆ ಎಂದರೆ ಸರಿ. ದಿನಾಂಕಃ 05.07.2017 ರಂದು ಮಾಣಿಕಪ್ಪನು ಮೃತಪಟ್ಟಿರುತ್ತಾನೆ ಎಂದರೆ ಸರಿ. ದಿನಾಂಕಃ 13.08.1998 ರಂದು ಮೊಘಲಪ್ಪ ಮೃತಪಟ್ಟಿರುತ್ತಾನೆ ಎಂದರೆ ಸರಿ. ವಾದಿಯರು ಹಾಗೂ ಪ್ರತಿವಾದಿ ನಂಃ 11 ರವರು ಸಾಯಣ್ಣನ ವಾರಸುದಾರರು ಇರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರ ಕುಟುಂಬಕ್ಕೆ ನಾವು ಯಾವುದೇ ರೀತಿಯ ಸಂಬಂದವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಮಾಣಿಕಪ್ಪ ಮತ್ತು ಮೊಘಲಪ್ಪ ರವರು ಜೀವಂತ ಇದ್ದಾಗ ಬೇರೆಯಾಗಿದ್ದರು ಎಂದರೆ ಸಾಕ್ಷಿಯು 2001 ರಲ್ಲಿ ಬೇರೆಯಾಗಿದ್ದರು ಎಂದು ಹೇಳುತ್ತಾರೆ. ಸಾಯಣ್ಣ, ಮಾಣಿಕಪ್ಪ ಮತ್ತು ಮೊಘಲಪ್ಪ ರವರು ಸಂಯುಕ್ತ ಕುಟುಂಬದ ಸದಸ್ಯರಾಗಿದ್ದರು ಎಂದರೆ ಸರಿ. ನಮ್ಮಗೆ 1/3 ಪಾಲನ್ನು ಕೇಳಲು ಯಾವುದೇ ರೀತಿಯ ಹಕ್ಕು

ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯ ಹಿರಿಯನಾದ ಮಾಣಿಕಪ್ಪನು ಎಲ್ಲಾ ಸಂಸಾರವನ್ನು ನೋಡಿಕೊಂಡಿ ಹೋಗುತ್ತಿದ್ದನ್ನು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಯಣ್ಣ ಮೃತಪಟ್ಟ ನಂತರ ದಾವಾ ಆಸ್ತಿ ಅನುಸೂಚಿ ಸಂಖೆಃ 4 ಮತ್ತು 5 ನ್ನು ಮಾಣಿಕಪ್ಪ ಮಾಡಿಕೊಂಡನ್ನು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅನುಸೂಚಿ ಸಂಖೆಃ 4 ಮತ್ತು 5 ನ್ನು ನನ್ನ ತಾಯಿಗೆ ಗೊತ್ತು ಆಗದ ಹಾಗೇ ಮಾಣಿಕಪ್ಪ ಮಾಡಿಕೊಂಡನ್ನು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಕಾನೂನುಬದ್ಧವಾಗಿ ಮಾಣಿಕಪ್ಪನ ಹೆಸರಿನಲ್ಲಿ ದಾವಾ ಆಸ್ತಿ ಅನುಸೂಚಿ ಸಂಖೆಃ 4 ಮತ್ತು 5 ವರ್ಗಾವಣೆ ಆಗಿರುತ್ತವೆ ಎಂದರೆ ಸರಿಯಲ್ಲ.

ಮೊಘಲಪ್ಪನಿಗೆ 2 ಜನ ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು ಇದ್ದರು ಅವರ ಹೆಸರುಗಳು ಹಣಮಂತ, ವಿಜಯ, ಸರೋಜಿನಿ, ಶಶಿಕಲಾ, ಸುಶೀಲ ಇರುತ್ತವೆ. ಪ್ರತಿವಾದಿ ನಂಃ 5 ರಿಂದ 10 ರವರು ಮೊಘಲಪ್ಪ ಮಕ್ಕಳು ಇರುತ್ತಾರೆ ಎಂದರೆ ಸರಿ. 2011 ರಲ್ಲಿ ನನ್ನ ತಾಯಿಯಾದ ಚಂದ್ರಮ್ಮ ರವರು ಅಸಲು ದಾವೆ ನಂಃ 65/2011 ನೇದ್ದನ್ನು ಪಾಲು ಕೋರಿ ಇದೇ ನ್ಯಾಯಾಲಯದಲ್ಲಿ ಈ ದಾವೆಯ ಪ್ರತಿವಾದಿ ನಂಃ 1 ರಿಂದ 4 ರವರ ತಂದೆಯಾದ ಮಾಣಿಕಪ್ಪ ಮತ್ತು 5 ಮತ್ತು 6 ರವರ ತಂದೆಯಾದ ಮೊಘಲಪ್ಪ ರವರ ವಿರುದ್ಧ ಸಲ್ಲಿಸಿದ್ದಳು ಎಂದರೆ ಸರಿ. ಅಸಲು ದಾವೆ ನಂಃ 65/2011 ನೇದ್ದರ ದಾವೆಯು ಬಹಳ ದಿನಗಳ ವರೇಗೆ ವಿಚಾರಣೆ ಆಗಿ ದಿನಾಂಕಃ 27.07.2015 ರಂದು ವಜಾ ಆಗಿತ್ತು ಎಂದರೆ ಸರಿಯಲ್ಲ. ಸದರಿ ದಾವೆಯು ವಿಚಾರಣೆಯಲ್ಲಿ ಇರುವಾಗ ನನ್ನ ತಾಯಿಯು ಮೃತಪಟ್ಟಿದ್ದಳು ಎಂದರೆ ಸರಿ. ಅಸಲು ದಾವೆ ನಂಃ 65/2011 ನೇದ್ದು ವಜಾ ಆದ ನಂತರ ನಾವು ಯಾವುದೇ ಮೆಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಯಾದಗಿರಿಯ ಶರಣಪ್ಪ ರವರ ಮಗಳನ್ನು ನಾನು ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆದ್ದರಿಂದ ನಾನು ಕುಟುಂಬ ಸಮೇತ ಯಾದಗಿರಿಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವೆ ನಂಃ 65/2011 ನೇದ್ದರ ದಾವೆಯನ್ನು ನಾನು ನಮ್ಮ ತಾಯಿಯ ಕಡೆಯಿಂದ ದಾಖಲಿಸಿದ್ದೆ ಎಂದರೆ ಸರಿ. 1987 ರಿಂದ 1992 ರ ವರೇಗೆ ನಾನು ಜಿಲ್ಲಾ ಪಂಚಾಯತಿಯ ಸದಸ್ಯನಾಗಿದ್ದೆ ಎಂದರೆ ಸರಿ. ಅಸಲು ದಾವೆ ನಂಃ 65/2011 ನೇದ್ದರ ದಾವೆಯ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿ. ಸದರಿ ದಾವೆಯ ಬಗ್ಗೆ ನಮ್ಮ ವಕೀಲರು ನನಗೆ ತಿಳಿಸಿದರು ಎಂದರೆ ಸರಿ. ಆದ್ದರಿಂದ ಈ

ದಾವೆಯನ್ನು ಸಲ್ಲಿಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯು ಮೃತಪಟ್ಟ ನಂತರ ಊರಲ್ಲಿ ಮಾತುಕತೆ ಆಗಿತ್ತು ಎಂದು ನಾನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. 2017 ರಲ್ಲಿ ಊರಲ್ಲಿ ಮಾತುಕತೆ ಆಗಿತ್ತು. ಶರಣಪ್ಪಗೌಡ, ಕಿಷ್ಟಪ್ಪ, ಹಣಮಂತ, ಬಸವರಾಜ, ತಾಯಪ್ಪ, ಹಣಮಂತ ಇವರೆಲ್ಲರೂ ಊರಲ್ಲಿ ಮಾತುಕತೆ ಆಗುವಾಗ ಇದ್ದರು. ನಮ್ಮ ಊರಲ್ಲಿ ಯಾವುದೇ ಮಾತುಕತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಾಲು ಕೊಡುವ ಬಗ್ಗೆ ಊರಲ್ಲಿ ಯಾವುದೇ ಮಾತುಕತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಾಲನ್ನು ದಾವೆಯಲ್ಲಿ ಕೊಡುತ್ತೇವೆ ಎಂದು ಮುಂದುಡುತ್ತಾ ಬಂದಿದ್ದರು 2023 ರಲ್ಲಿ ಭಾಗನ್ನು ಕೊಡಲು ನಿರಾಕರಿಸಿದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಇಲ್ಲಿಯವರೇಗೂ ಯಾವುದೇ ರೀತಿಯ ಪಾಲುವಿಭಾಗ ಆಗಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಆಗಲಿ ಅಥವಾ ನಮ್ಮ ತಾಯಿಯಾಗಲಿ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಕಬ್ಜೆಯಲ್ಲಿ ಇರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ಈ ದಾವೆಯನ್ನು ಸಲ್ಲಿಸಲು ನಮ್ಮಗೆ ಯಾವುದೇ ರೀತಿಯ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಕಾರಣ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಹಕ್ಕನ್ನು ನೀಡಲು ತಿರಸ್ಕರಿಸಿದ್ದರು ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯ ಮೇಲೆ ನಿಮ್ಮಗೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಆದ್ದರಿಂದ ಪ್ರತಿವಾದಿಯರು ನಿಮ್ಮ ಹಕ್ಕನ್ನು ತಿರಸ್ಕರ ಮಾಡುವ ಪ್ರಶ್ನೇ ಮಾಡುವ ಅಧಿಕಾರ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಯಲ್ಲಿ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ದಾವಾದ ಆಸ್ತಿಯ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಅಸಲು ದಾವೆ ನಂಃ 65/2011 ನೇದ್ದರಲ್ಲಿ ಮಾಣಿಕಪ್ಪ ಮತ್ತು 6 ನೇ ಪ್ರತಿವಾದಿಯು ಜಾವಬನ್ನು ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಅದೇ ರೀತಿ ಸದರಿ ದಾವೆಯಲ್ಲಿ ಅವರು ಪ್ರತಿ ಉತ್ತರ ನೀಡಿದರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಜಾವಬಿನಲ್ಲಿ ಅವರು ನಿಮ್ಮ ತಾಯಿಗೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದು ಹೇಳಿದರು ಎಂದರೆ ಸಾಕ್ಷಿಯು

ಅವರು ನಮ್ಮ ತಾಯಿಗೆ ಮೋಸ ಮಾಡಿದರು ಎಂದು ಹೇಳುತ್ತಾರೆ. ಆ ಕಾರಣ ಸದರಿ ದಾವೆಯು ದಿನಾಂಕಃ 27.07.2015 ರಂದು ವಜಾ ಆಗಿತ್ತು ಎಂದರೆ ಸರಿಯಲ್ಲ. ಸಾಯಣ್ಣ ಹಿರಿಯ ಆಸ್ತಿಗಳನ್ನು ಮಾರಾಟ ಮಾಡಿ ನನ್ನ ತಾಯಿಯ ಹೆಸರಿನಲ್ಲಿ ಸರ್ವೆ ನಂಃ 418, 80 ಮತ್ತು 338 ನೇದ್ದರ ಆಸ್ತಿಗಳನ್ನು ಖರೀದಿ ಮಾಡಿದನ್ನು ಎಂದರೆ ಸರಿ. ಈ ಜಮೀನುಗಳನ್ನು ಖರೀದಿ ಮಾಡಿ 50 ವರ್ಷಗಳು ಆಗಿರುತ್ತವೆ ಎಂದರೆ ಸರಿ. ದಾವಾ ಅನುಸೂಚಿ ನಂಃ 3 ಮತ್ತು 4 ನೇದ್ದವುಗಳನ್ನು ಮಾಣಿಕಪ್ಪನು ತನ್ನ ಸ್ವಂತ ಆದಾಯದ ಮೂಲಕ ಖರೀದಿ ಮಾಡಿದನ್ನು ಎಂದರೆ ಸರಿಯಲ್ಲ. ಮಾಣಿಕಪ್ಪನು ಬೇರೆಯವರ ಜಮೀನುಗಳನ್ನು ಪಾಲಿನಿಂದ ಮಾಡುತ್ತಿದ್ದನ್ನು ಎಂದರೆ ಸರಿ. ಸದರಿ ಜಮೀನುಗಳಿಂದ ಬಂದ ಆದಾಯದಿಂದ ದಾವಾ ಅನುಸೂಚಿ ಸಂಖ್ಯೆ 3 ಮತ್ತು 4 ನೇದ್ದವುಗಳ ಜಮೀನನ್ನು ಖರೀದಿ ಮಾಡಿದನ್ನು ಎಂದರೆ ಸರಿಯಲ್ಲ. ದಾವಾ ಅನುಸೂಚಿ ನಂಃ 3 ಮತ್ತು 4 ಜಮೀನುಗಳು ಹಿರಿಯರ ಜಮೀನುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಆಸ್ತಿಗಳು ನಂಃ 3 ಮತ್ತು 4 ಜಮೀನುಗಳನ್ನು ಮಾಣಿಕಪ್ಪನು ಸ್ವಂತ ಗಳಿಕೆಯ ಆದಾಯದಿಂದ ಖರೀದಿ ಮಾಡಿದರಿಂದ ಆತನ ಹೆಸರಿನಲ್ಲಿ ವರ್ಗಾವಣೆ ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ನಂಃ 3 ಮತ್ತು 4 ಜಮೀನುಗಳಲ್ಲಿ ನಮ್ಮಗೆ ಮತ್ತು 3 ರಿಂದ 11 ನೇ ಪ್ರತಿವಾದಿಯರಿಗೆ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯು ಮೃತಪಡುವಾಗ ಅವರಿಗೆ 82 ವಯಸ್ಸು ಇತ್ತು. ನನ್ನ ತಾಯಿಯು ಒಟ್ಟು ಕುಟುಂಬದ ಸದಸ್ಯಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ನಂಃ 1,2 ಮತ್ತು 5 ಜಮೀನುಗಳಲ್ಲಿ ನಮ್ಮಗೆ ಯಾವುದೇ ರೀತಿಯ ಹಕ್ಕು ಮತ್ತು ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಯನ್ನು ಆಂಧ್ರಪ್ರದೇಶ ರಾಜ್ಯದ ಪಿದ್ರಪಲ್ಲಿ ಗ್ರಾಮದ ನರಸಪ್ಪನೊಂದಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ನನ್ನ ತಾಯಿಯ ಮದುವೆ ಆಗಿ 65-70 ವಯಸ್ಸು ಆಗಿರುತ್ತದೆ ಎಂದರೆ ಸರಿ. ನನ್ನ ತಾಯಿಯು ಮದುವೆ ಆಗಿ ಗಂಡನ ಮನೆಯಲ್ಲಿ ಬಹಳ ದಿನಗಳ ವರೇಗೆ ವಾಸವಾಗಿದ್ದಳು ಎಂದರೆ ಸರಿಯಲ್ಲ. ಸದರಿ ಗ್ರಾಮದಲ್ಲಿ ನನ್ನ ತಾಯಿಗೆ ಉಪಜೀವನಕ್ಕಾಗಿ ಏನು ಇರಲಿಲ್ಲ ಆದ್ದರಿಂದ ಅವರು ಚಿನ್ನಕಾರ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಉಪಜೀವನಕ್ಕಾಗಿ ಮಾಣಿಕಪ್ಪ ಮತ್ತು ಸಾಯಣ್ಣ ಕೂಡಿ ಸರ್ವೆ ನಂಃ 418 ರಲ್ಲಿ 4 ಎಕರೆ ಜಮೀನನ್ನು ಖರೀದಿ ಮಾಡಿದರು ಎಂದರೆ ಸರಿಯಲ್ಲ. ಮಾಣಿಕಪ್ಪ

ಮತ್ತು ಸಾಯಣ್ಣ ರವರು ಕೂಡಿ ಸರ್ವೆ ನಂಃ 425 ರಲ್ಲಿ 3 ಎಕರೆ 26 ಗುಂಟೆ ಜಮೀನನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಿದರು ಎಂದರೆ ಸರಿಯಲ್ಲ. ನಾನು 1998 ರಲ್ಲಿ ಸರ್ವೆ ನಂಃ 425 ರಲ್ಲಿ 3 ಎಕರೆ 26 ಗುಂಟೆ ಜಮೀನನ್ನು ಸ್ವಂತ ಖರೀದಿ ಮಾಡಿರುತ್ತೇನೆ. ಸಾಕ್ಷಿಯು ಮುಂದುವರೆದು ನನ್ನ ಮಾವನವರು ಸಹಾಯ ಮಾಡಿ ಈ ಜಮೀನನ್ನು ನನಗೆ ಕೊಡಿಸಿದ್ದರು ಎಂದು ಹೇಳುತ್ತಾರೆ. ಮಾಣಿಕಪ್ಪ ಮತ್ತು ಸಾಯಣ್ಣ ಕೂಡಿ ಸರ್ವೆ ನಂಃ 338 ರಲ್ಲಿ ಇರುವ 3 ಎಕರೆ ಜಮೀನನ್ನು ಚಂದ್ರಮ್ಮಳ ಸೊಸೆಯಾದ ಶಕುಂತಲಾ ರವರ ಹೆಸರಿನಲ್ಲಿ ಖರೀದಿ ಮಾಡಿದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಹೆಣ್ಣು ಕೊಟ್ಟ ಮಾವ ಖರೀದಿ ಮಾಡಿಕೊಟ್ಟಿರುತ್ತಾನೆ ಎಂದು ಹೇಳುತ್ತಾರೆ. ಶಕುಂತಲಾ ಎಂದರೆ ನನ್ನ ಹೆಂಡತಿ ಇರುತ್ತಾಳೆ ಎಂದರೆ ಸರಿ. ಈ ಮೂರು ಜಮೀನುಗಳನ್ನು ನಮ್ಮ ಉಪಜೀವನಕ್ಕಾಗಿ ಮಾಣಿಕಪ್ಪ ಮತ್ತು ಸಾಯಣ್ಣ ರವರು ನಮ್ಮಗೆ ಖರೀದಿ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಂತರ ಮಾಣೀಕಪ್ಪ ಮತ್ತು ಸಾಯಣ್ಣ ರವರು ಸದರಿ ಜಮೀನುಗಳನ್ನು ನಮ್ಮಗೆ ನೀಡಬೇಕು ಎಂದು ಕೇಳಿದರು ಎಂದರೆ ಸರಿಯಲ್ಲ. ಆ ಎಲ್ಲಾ ಜಮೀನುಗಳು ನಿಮ್ಮ ಜಮೀನುಗಳು ಇರುತ್ತವೆ ಎಂದು ನಾವು ಒಪ್ಪಿಕೊಂಡಿದ್ದೇವು ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಎತ್ತಿಹಾಕುವ ಸಲುವಾಗಿ ನಮ್ಮ ತಾಯಿಯ ಕಡೆಯಿಂದ ಅವರ ವಿರುದ್ದ ಅಸಲು ದಾವಾ ನಂಃ 65/2011 ನೇದ್ದನ್ನು ಸಲ್ಲಿಸಿದ್ದೇವು ಎಂದರೆ ಸರಿಯಲ್ಲ. ಸುಮಾರು 65 ವರ್ಷಗಳಿಂದ ನಾವು ಆಗಲಿ ಅಥವಾ ನನ್ನ ತಾಯಿಯಾಗಲಿ ದಾವಾ ಜಮೀನುಗಳ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಇರುವುದಿಲ್ಲ ಎಂದು ಗೊತ್ತಿದ್ದರು ಸಹ ಹೇಗಾದರೂ ಮಾಡಿ ದಾವಾದ ಆಸ್ತಿಯನ್ನು ಎತ್ತಿಹಾಕುವ ಸಲುವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ